**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಓ ಎಸ್ 48/2019**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ದಿನಾಂಕಃ** 01-03-2025 **ಪಿ ಡಬ್ಲ್ಯೂ 3**

**ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರಿಂದಃ

ನಾನು 3 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಹರಿಹರದ ಹಳ್ಳದಕೇರಿ, ಅಗಸರ ಬೀದಿಯಲ್ಲಿ ವಾಸವಾಗಿದ್ದೇನೆ. ಈ ವಿಚಾರವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸುವ ಕಾಲಕ್ಕೆ ತಿಳಿಸಿದ್ದೇನೆ. ಪ್ರಸ್ತುತ ರಾಣೆಬೆನ್ನೂರು ನಗರದಲ್ಲಿ ವಾಸವಾಗಿದ್ದೇನೆ. ವಾದಿ ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ಯಾವ ಯಾವ ದಾಖಲೆಗಳನ್ನು ಸಲ್ಲಿಸಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಈ ದಾವೆಯಲ್ಲಿ ದಾವಾ ಸ್ವತ್ತು ವಾದಿಯದು ಎಂದು ತೋರಿಸಲು ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದರೆ ಸಾಕ್ಷಿಯು ದಾಖಲೆಗಳನ್ನು ನೋಡಿ ನಿಪಿ.2 ನ್ನು ತೋರಿಸಿ ಸದರಿ ದಾಖಲೆಯನ್ನು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.2 ರ ಪ್ರಕಾರ ದಾವಾ ಆಸ್ತಿ ವಾದಿಯ ಹೆಸರಿಗೆ ಕ್ರಯ ಆಗಿಲ್ಲ ಎಂದರೆ ಸರಿ. ನನ್ನ ಅಣ್ಣ ವಾದಿ ಮತ್ತು ಗೌಡ್ರ ನಂಜುಂಡಪ್ಪ ನವರ ನಡುವೆ ಆದ ದಾವಾ ಆಸ್ತಿಯ ವ್ಯವಹಾರದ ಬಗ್ಗೆ ನನಗೆ ಖುದ್ದು ಮಾಹಿತಿ ಇದೆ. ಸದರಿ ವ್ಯವಹಾರದಲ್ಲಿ ನಾನು ಭಾಗವಹಿಸಿದ್ದೆನು ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಲು ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ವಾದಿ ಮತ್ತು ನಂಜುಂಡಪ್ಪನವರ ಯಾವುದೇ ವ್ಯವಹಾರದಲ್ಲಿ ಭಾಗವಹಿಸಿಲ್ಲ ಎಂದರೆ ಸರಿಯಲ್ಲ. ನಿಪಿ.2 ರಲ್ಲಿ ಅದನ್ನು ಮಾಡುವ ಕಾಲಕ್ಕೆ ಸಹಿ ಹಾಕಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ಹೇಳಿದ ರೀತಿ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಸುಮಾರು 35 ವರ್ಷಗಳಿಂದ ದಾವಾ ಆಸ್ತಿ ಸ್ವಾಧೀನದಲ್ಲಿರುವ ಬಗ್ಗೆ ನಾವು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ. ಈ ಬಗ್ಗೆ ದಾಖಲೆಗಳನ್ನು ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಗೌಡ್ರು ನಂಜುಂಡಪ್ಪ ಯಾವ ದಿನಾಂಕ, ತಿಂಗಳು ಮತ್ತು ವರ್ಷ ದಂದು ತೀರಿಕೊಂಡಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಪ್ರತಿವಾದಿ 1 ರಿಂದ 4 ಮೃತ ಗೌಡ್ರು ನಂಜುಂಡಪ್ಪನವರ ಮಕ್ಕಳು ಎಂದರೆ ಸರಿ. ಸದರಿಯವರು ತೀರಿಕೊಂಡ ನಂತರ ದಾವಾ ಶೆಡ್ಯೂಲ್ ಆಸ್ತಿ ಪ್ರತಿವಾದಿ 1 ರಿಂದ 4 ರವರಿಗೆ ಪೌತಿ ಆದಾರದ ಮೇಲೆ ಖಾತೆಯಾಗಿದೆ ಎಂದರೆ ಸಾಕ್ಷಿಯು ನಂಜುಂಡಪ್ಪನವರಿಗೆ ಆಸ್ತಿಯನ್ನು ಕ್ರಯ ಮಾಡಿ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 1 ರಿಂದ 4 ರವರು ದಾವಾ ಆಸ್ತಿಯಲ್ಲಿ ಅರ್ಧ ಭಾಗವನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಇನ್ನುಳಿದ ಅರ್ಧ ಭಾಗವನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5 ಮತ್ತು 6 ನೇ ಪ್ರತಿವಾದಿಯರು ತಾವು ದಾವಾ ಆಸ್ತಿಯನ್ನು ಖರೀದಿಸಿದಾಗಿನಿಂದ ಸದರಿ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ತಾವೇ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿ. ಸಾಕ್ಷಿಗೆ ಕೆಲವು ಛಾಯ ಚಿತ್ರಗಳನ್ನು ತೋರಿಸಲಾಗಿ ಸದರಿ ಛಾಯ ಚಿತ್ರಗಳಲ್ಲಿರುವ ಕಟ್ಟಡವು ಈ ಪ್ರಸ್ತುತ ದಾವೆಯ ತಕರಾರನ್ನು ಸಲ್ಲಿಸುವ ಕಾಲಕ್ಕೆ ಕಟ್ಟಡವನ್ನು ಕಟ್ಟಿದಂತಹ ಛಾಯ ಚಿತ್ರಗಳು ಎಂದರೆ

ಸರಿ ಎಂದು ಸಾಕ್ಷಿಯು ನಂತರದಲ್ಲಿ ಕಟ್ಟಡ ಕಟ್ಟಿರುವುದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಗುರುತಿಸಿದ ಛಾಯ ಚಿತ್ರಗಳನ್ನು ಮುಖಾಬಿಲೆಯಾಗಿ ನಿಡಿ.1 ರಿಂದ 5 ಎಂದು ಗುರುತಿಸಲಾಯಿತು. ವಾದಿ ದಾವಾ ಆಸ್ತಿಯಲ್ಲಿ ಶೆಡ್ ನ್ನು ಹಾಕಿದ್ದು ಅದನ್ನು ತೆರವು ಮಾಡಿಸಿರುತ್ತಾರೆ ಎಂದು ಹೇಳಿದ್ದು ಈ ಬಗ್ಗೆ ದೂರು ನೀಡಿರುತ್ತೀರಾ ಎಂದರೆ ಸಾಕ್ಷಿಯು ವಾದಿಯ ದೂರುನ್ನು ನೀಡಲು ಹೋಗಿರುತ್ತಾರೆ ಆದರೆ ಅದು ದಿವಾಣಿ ವ್ಯಾಜ್ಯ ಎಂದು ದೂರನ್ನು ಸ್ವೀಕರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಈ ಬಗ್ಗೆ ಠಾಣೆಯವರು ನೀಡಿದ ಹಿಂಬರಹವನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ದಿಃ 12.12.1986 ರಂದು ನಂಜುಂಡಪ್ಪನವರು ನನ್ನ ಅಣ್ಣನ ಹೆಸರಿಗೆ ಯಾವುದೇ ಖರೀದಿ ಪತ್ರ ಮಾಡಿಕೊಟ್ಟಿಲ್ಲ ಹಾಗೂ ನಾವು ದಾವಾ ಆಸ್ತಿಯ ಸ್ವಾದೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ವಾದಿ ಯಾವ ಕಾಲಕ್ಕೂ ದಾವಾ ಆಸ್ತಿಯ ಸ್ವಾದೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ವಾದಿ ನನ್ನ ಅಣ್ಣನಿಗೆ ಅನುಕೂಲವಾಗಲೀ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ .**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ಹರಿಹರ